

ರಾಜುನ
ಪ್ರವಾಸ
ಪರಮಾಣು ಸ್ಥಾವರಕ್ಕೆ ಪ್ರವಾಸದ ಕಥೆ
TN 28 AP 1234
PART - 2

ಇಲ್ಲಿಯವರೆಗಿನ ಕಥೆಯ ಪ್ರಕಾರ, ಪ್ರಸ್ತುತ ನಗರದಲ್ಲಿ ವಾಸವಿರುವ ವಿದ್ಯಾವಂತ ಸ್ಥಳೀಯ ಯುವಕ ಶೇಖರ್, ತನ್ನ ಗ್ರಾಮದವರೊಂದಿಗೆ ಪರಮಾಣು ಶಕ್ತಿಯ ಬಗ್ಗೆ ಚರ್ಚೆಯಲ್ಲಿ ತೊಡಗಿದ್ದಾನೆ ಹಾಗೂ ಪರಮಾಣು ವಿಜ್ಞಾನಕ್ಕೆ ಸಂಬಂಧಿಸಿದ ಕಲ್ಪನೆಗಳನ್ನು ದೂರಮಾಡುತ್ತಿದ್ದಾನೆ, ಮತ್ತು ಮನುಕುಲಕ್ಕೆ ಅದರ ಅನೇಕ ಸೌಲಭ್ಯಗಳ ಬಗ್ಗೆ ವಿವರವನ್ನು ನೀಡುತ್ತಿದ್ದಾನೆ. ಆತನ ಸ್ಪಷ್ಟ ಹಾಗೂ ಸರಳವಾದ ವಿವರಣೆಯು ಗ್ರಾಮಸ್ಥರಿಗೆ ಸುಲಭವಾಗಿ ಅರ್ಥವಾಗುವಂತಿದ್ದು, ಅವರೀಗ ಪರಮಾಣು ಶಕ್ತಿಯು ತಮ್ಮ ಜೀವನದಲ್ಲಿ ತರುವ ಸಕಾರಾತ್ಮಕ ಬದಲಾವಣೆಗಳ ಬಗ್ಗೆ ಸಹಮತ ವ್ಯಕ್ತಪಡಿಸುತ್ತಾರೆ. ಈಗ ಗ್ರಾಮಸ್ಥರು ಪರಮಾಣು ಶಕ್ತಿಯ ಬಗ್ಗೆ ಹೆಚ್ಚು ತಿಳಿಯಲು ಕಾತುರರಾಗಿದ್ದಾರೆ. ಶೀಘ್ರವೇ, ಅವರೆಲ್ಲಾ ಪರಮಾಣು ಶಕ್ತಿ ಸ್ಥಾವರಕ್ಕೆ ಮಾರ್ಗದರ್ಶೀ ಪ್ರವಾಸ ಹೊರಡಲು ನಿರ್ಧರಿಸಿದ್ದಾರೆ.

ಆದ್ದರಿಂದ, ಈಗ ನಾವು ಅವರ ಪರಮಾಣು ಶಕ್ತಿ ಸ್ಥಾವರದ ಕುತೂಹಲಕಾರೀ ಪ್ರವಾಸವನ್ನು ಸೇರೋಣ.. ಈಗ ರಾಜು ಮತ್ತು ಗ್ರಾಮಸ್ಥರು ಇದನ್ನು ಹೇಗೆ ಆನಂದಿಸುತ್ತಾರೆ ಎಂದು ನೋಡೋಣ...




ಹಿಂದಿನ ಭೇಟಿಯಲ್ಲಿ ಶೇಖರ್‌ನೊಂದಿಗಿನ ಅವರ ಚರ್ಚೆಯ ಆಧಾರದ ಮೇಲೆ, ಗ್ರಾಮಸ್ಥರು ಮುಖ್ಯಸ್ಥರನ್ನು ಭೇಟಿಯಾಗಿ ಪರಮಾಣು ಶಕ್ತಿ ಸ್ಥಾವರಕ್ಕೆ ಪ್ರವಾಸ ಹೋಗುವ ಕಾರ್ಯಕ್ರಮದ ಬಗ್ಗೆ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ವಿನಂತಿಸಿದರು.
ಮುಖ್ಯಸ್ಥ (ಶೇಖರ್‌ನೊಂದಿಗೆ ದೂರವಾಣಿಯಲ್ಲಿ) ಹಲೋ ಶೇಖರ್!
ನಮಸ್ತೆ, ಅಜ್ಜ!
ಹಲೋ, ಶೇಖರ್! ರಾಜು ಅಂಕಲ್, ವಸಂತ ಆಂಟಿ ಹಾಗೂ ಇತರ ಗ್ರಾಮಸ್ಥರು ಪರಮಾಣು ಶಕ್ತಿ ಸ್ಥಾವರಕ್ಕೆ ಪ್ರವಾಸ ಹೊರಡಲು ಸಿದ್ಧರಾಗಿದ್ದಾರೆ. ನೀವು ಸಿದ್ಧರಿದ್ದೀರಾ?
(ಕೆಲವು ಸಮಯದ ನಂತರ) ಹಲೋ, ಅಜ್ಜ!... ಹಲೋ, ಓಹ್, ಶೇಖರ್.ನೀನು ಅವರೊಂದಿಗೆ ಮಾತನಾಡಿದೆಯಾ?
ಖಂಡಿತ ಅಜ್ಜ. ನಾನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ನಮ್ಮ ಭೇಟಿಯ ಬಗ್ಗೆ ಮಾತನಾಡುತ್ತೇನೆ.ಹಾಗೂ ಅದರ ಬಗ್ಗೆ ಶೀಘ್ರವೇ ನಿಮಗೆ ತಿಳಿಸುತ್ತೇನೆ


ಹೌದು ಅಜ್ಜ, ನಾನು ಅವರೊಂದಿಗೆ ಮಾತನಾಡಿದೆ, ಅವರು ಸಂತೋಷದಿಂದ ಒಪ್ಪಿಗೆ ನೀಡಿದರುನಾನು ಇನ್ನೆರಡು ದಿನಗಳಲ್ಲಿ ಹಳ್ಳಿಗೆ ಹಿಂದಿರುಗುತ್ತೇನೆ, ನಿಮ್ಮನ್ನೆಲ್ಲಾ ಅಲ್ಲಿ ನೋಡುತ್ತೇನೆದಯವಿಟ್ಟು ರಾಜು ಅಂಕಲ್, ವಸಂತ ಆಂಟಿ, ಮತ್ತು ಇತರ ಗ್ರಾಮಸ್ಥರಿಗೆ ಸಿದ್ಧವಾಗಿರಲು ಹೇಳಿ..ನಾನು ಇನ್ನೆರಡು ದಿನದಲ್ಲಿ ನಿಮ್ಮನ್ನು ಕೈಗಾ ಪರಮಾಣು ಶಕ್ತಿ ಸ್ಥಾವರಕ್ಕೆ ಪ್ರವಾಸ ಕರೆದೊಯ್ಯಲು ಅಗತ್ಯವಾದ ಎಲ್ಲಾ ಸಿದ್ಧತೆಗಳೊಂದಿಗೆ ಬರುತ್ತೇನೆನಾನು ಈಗ ರಜೆ ತೆಗೆದುಕೊಳ್ಳಬೇಕು..ಆದ್ದರಿಂದ, ಇನ್ನೆರಡು ದಿನಗಳಲ್ಲಿ ನಿಮ್ಮನ್ನು ನೋಡುತ್ತೇನೆ, ಬೈ ಅಜ್ಜ!
ದೇವರು ನಿನ್ನನ್ನು ಚೆನ್ನಾಗಿಡಲಿ!
ಸರಿ, ರಾಜು ನೀವೆಲ್ಲಾ ಈಗ ಪ್ರವಾಸಕ್ಕೆ ಹೋಗಬಹುದು. (ಹಾಹಾಹಾ..ಎಲ್ಲರ ಮುಖದಲ್ಲೂ ನಗುವಿದೆ !)
ಹೌದು ಮುಖ್ಯಾಜಿ, ಈಗ ನಾವು ಹೊರಡುತ್ತೇವೆ ಮತ್ತು ಇನ್ನೆರಡು ದಿನದಲ್ಲಿ ನಾವೆಲ್ಲಾ ಬೆಳಿಗ್ಗೆ 8 ಗಂಟೆಗೆ ಇಲ್ಲಿ ಸೇರೋಣ. ಬೈ, ಮತ್ತೆ ನೋಡೋಣ!
ಎಲ್ಲರಿಗೂ ಶುಭ ಸುಪ್ರಭಾತ!
ಎರಡು ದಿನಗಳ ನಂತರ. ಎಲ್ಲಾ ಗ್ರಾಮಸ್ಥರೂ ಮುಖ್ಯಾಜಿಯವರ ಮನೆಗೆ ತೆರಳಿದರು


ಮುಖ್ಯಾಜಿ, ನಮಸ್ಕಾರ!
ನಮಸ್ಕಾರ! ನಾನು ನಿಮ್ಮನ್ನೇ ನಿರೀಕ್ಷಿಸುತ್ತಿದ್ದೆ.
ಮುಖ್ಯಾಜಿ, ಶೇಖರ್ ಎಲ್ಲಿ?..... ಆತನಿನ್ನೂ ಇಲ್ಲಿ ಬಂದಿಲ್ಲವೇ?
ಮುಖ್ಯಾಜಿ, ನಾನೂ ಸಹ ಆತನನ್ನು ಇಂದು ನೋಡಿಲ್ಲ.
ನನಗನಿಸುತ್ತದೆ, ಆತ ನಮ್ಮೊಂದಿಗೆ ತಮಾಷೆ ಮಾಡಿದ್ದಾನೆಂದು.
ನನಗೆ ಆತನ ಬಗ್ಗೆ ಚೆನ್ನಾಗಿ ಗೊತ್ತು, ಮಗುವಾಗಿದ್ದಾಗ, ಆತ ತುಂಬಾ ತುಂಟನಾಗಿದ್ದ....
(ಎಲ್ಲರೂ ಒಬ್ಬರನ್ನೊಬ್ಬರು ನೋಡಲು ಆರಂಭಿಸಿದಾಗ, ಗುಂಪಿನಲ್ಲಿ ಗದ್ದಲವೆದ್ದಿತು)


(ನಗುಮುಖದಿಂದ)ಇಲ್ಲ, ಇಲ್ಲ..ಹಾಗೇನೂ ಇಲ್ಲ.ದಯವಿಟ್ಟು ತಾಳ್ಮೆ ಇರಲಿ.. ಆತ ಬರುತ್ತಿರಬಹುದು.ಓಹ್, ಇಲ್ಲಿ ನೋಡಿ, ಬಂದ.
ಅದೇ ಸಮಯದಲ್ಲಿ, ಶೇಖರ್ ದೊಡ್ಡ ಬಸ್‌ನಿಂದ ಕೆಳಗಿಳಿದ ಹಾಗೂ ಗುಂಪಿನೆಡೆಗೆ ಬಂದ.
ನಮಸ್ತೆ, ಅಜ್ಜ!
ನಿನ್ನನ್ನು ನೋಡಿ ಸಂತೋಷವಾಯಿತು. ಸಮಯಕ್ಕೆ ಸರಿಯಾಗಿ ಸಹ ಬಂದಿದ್ದೀಯೆ.
ಎಲ್ಲರಿಗೂ ನಮಸ್ಕಾರ! ವಾವ್, ನೀವೆಲ್ಲಾ ಇಂದು ತಂಬಾ ಚೆನ್ನಾಗಿ ಕಾಣುತ್ತಿದ್ದೀರಿ. ಹೌದು ರಾಜು ಅಂಕಲ್. ನೀವೂ ಸಹ ಇಂದು ಬಹಳ ಸಂತೋಷವಾಗಿ ಕಾಣುತ್ತಿದ್ದೀರಿ.
ಹೌದು ಶೇಖರ್, ನಾವೆಲ್ಲಾ ಪರಮಾಣು ಶಕ್ತಿ ಸ್ಥಾವರದ ಭೇಟಿಯ ಬಗ್ಗೆ ಕುತೂಹಲದಿಂದಿದ್ದೇವೆ. ಅದು ಎಷ್ಟು ದೊಡ್ಡದಿರಬಹುದು ಎಂದು ನೋಡಲು ನಾವೆಲ್ಲಾ ಕಾತುರರಾಗಿದ್ದೇವೆ.
ಹೌದು ಶೇಖರ್! ನಾವೆಲ್ಲಾ ಶಕ್ತಿ ಸ್ಥಾವರದ ಭೇಟಿಯ ಬಗ್ಗೆ ಕಾತುರರಾಗಿದ್ದೇವೆ.



ಸರಿ, ಈಗ ನಾವು ಹೊರಡೋಣ. ನಾವು ಏತಕ್ಕಾಗಿ ನಿರೀಕ್ಷಿಸಬೇಕು? ನಾವೆಲ್ಲಾ ಬಸ್‌ನಲ್ಲಿ ಕುಳಿತುಕೊಳ್ಳೋಣ ಮತ್ತು ಶೀಘ್ರವೇ ಅಲ್ಲಿಗೆ ತಲುಪೋಣ.
ನಾವೆಲ್ಲಾ ಬಸ್ ನೆಡೆಗೆ ಚಲಿಸೋಣ.
ಸ್ವಲ್ಪ ಸಮಯದ ನಂತರ ಬಸ್ ಚಲಿಸಿತು
ನಿಮಗೆ ಹೇಗನಿಸುತ್ತಿದೆ, ರಾಜು ಅಂಕಲ್? ನೀವು ಇದನ್ನು ಆನಂದಿಸುತ್ತಿದ್ದೀರಿ ಎಂದುಕೊಳ್ಳುತ್ತೇನೆ.
ಹೌದು.ನಾವೆಲ್ಲಾ ಬಹಳ ಸಂತೋಷಪಡುತ್ತಿದ್ದೇವೆ. ನಾವೆಲ್ಲಾ ಬಸ್ ಅಲ್ಲಿಗೆ ತಲುಪುವುದನ್ನೇ ನಿರೀಕ್ಷಿಸುತ್ತಿದ್ದೇವೆ. ಅದಾಗ್ಯೂ, ನಾವೆಲ್ಲಾ ಒಂದು ವಿಷಯವನ್ನು ಕೇಳಲು ಮರೆತಿದ್ದೇವೆ
ಏನಾಯಿತು, ನೀವು ಏನು ಕೇಳಬೇಕೆಂದುಕೊಂಡಿದ್ದಿರಿ?
ನೀನು ಪರಮಾಣು ಶಕ್ತಿ ಸ್ಥಾವರದೊಂದಿಗೆ ಹೇಗೆ ಸಂಪರ್ಕ ಹೊಂದಿದ್ದೀಯ?.....ನೀನು ಇಷ್ಟೊಂದು ಮಾಹಿತಿಗಳನ್ನು ಹೇಗೆ ಸಂಗ್ರಹಿಸಲು ಸಾಧ್ಯವಾಯಿತು? ನೀನು ಇದನ್ನು ಹೇಗೆ ಮಾಡಿದೆ?


(ಶೇಖರ್ ನಗುತ್ತಲೇ). ನೀವು ಇದನ್ನು ನನಗೆ ಕೇಳುತ್ತೀರಿ ಎಂದು ನನಗೆ ತಿಳಿದಿತ್ತು.ನಾನು ಎಂಜಿನಿಯರಿಂಗ್ ಓದುವಾಗ, ನಮ್ಮನ್ನು ಅಲ್ಲಿಗೆ 2 ತಿಂಗಳ ಕಾಲ ತರಬೇತಿಗಾಗಿ ಕಳುಹಿಸಲಾಗಿತ್ತು, ನಾನು ಅಲ್ಲಿನ ಎಲ್ಲಾ ಕಾರ್ಯಗಳನ್ನೂ ಬಹಳ ಹತ್ತಿರದಿಂದ ನೋಡಿದೆ. ಇದೇ ಕಾರಣಕ್ಕೆ ನಾನು ನಿಮಗೆ ಪರಮಾಣು ಶಕ್ತಿಯ ಬಗ್ಗೆ ಇಷ್ಟು ವಿವರಿಸಲು ಸಾಧ್ಯವಾಯಿತು.ಈಗ ನಿಮಗೆ ಅರ್ಥವಾಯಿತು ಎಂದುಕೊಳ್ಳುತ್ತೇನೆ.
ತಿಳಿಯಿತು, ನೀನು ಬಹಳ ಬುದ್ಧಿವಂತನ ಹಾಗೆ ಕಾಣುತ್ತೀಯ
ಓಹ್, ನಾವು ಬಂದೆವು ಅಂಕಲ್ ನಾವು ಈಗಾಗಲೇ ತಲುಪಿದ್ದೇವೆಈಗ ನಾವು ಬಸ್ ಇಳಿಯೋಣ, ಹಾಗೂ ಒಂದು ಜಾಗದಲ್ಲಿ ನಿಲ್ಲೋಣ. ಮೊದಲು, ನಾನು ಸುರಕ್ಷತಾ ಅಧಿಕಾರಿಗಳೊಂದಿಗೆ ಮಾತನಾಡಿ ಬರುತ್ತೇನೆ..
மதராஸ் அணுமின் நிலையம்
ಹೌದು ಶೇಖರ್.. ನೀನು ಹೇಳಿದಂತೆ.
(ಬಸ್ ಪರಮಾಣು ಶಕ್ತಿ ಸ್ಥಾವರದ ಗೇಟಿನ ಹತ್ತಿರ ಬಂದಿತು)
மதராஸ் அணுமின் நிலையம்
ಎಲ್ಲಾ ಗ್ರಾಮಸ್ಥರೂ ಕೆಳಗಿಳಿದು, ಒಂದು ಜಾಗದಲ್ಲಿ ನಿಂತರು..ಗೇಟಿನ ಹತ್ತಿರವಿರುವ ಸುರಕ್ಷತೆಯ ಮಟ್ಟವನ್ನು ನೋಡಿ ಆಶ್ಚರ್ಯಚಕಿತರಾದರು.
மதராஸ் அணுமின் நிலையம்
ಶೇಖರ್ ಗೇಟಿನ ಹತ್ತಿರವಿರುವ ಸುರಕ್ಷತಾ ಕೊಠಡಿಯ ಹತ್ತಿರ ನಡೆದ
ಮಧ್ಯದಲ್ಲಿ, ರಾಜು ಹಾಗೂ ಇತರ ವ್ಯಕ್ತಿಗಳು ಗೇಟಿನ ಮೂಲಕ ನೋಡಲು ಪ್ರಯತ್ನಿಸಿದರು.
ಯಾರಾದರೂ ಮೊಬೈಲ್, ಕ್ಯಾಮರಾ ಅಥವಾ ಇತರ ವಿದ್ಯುತ್ ಉಪಕರಣಗಳನ್ನು ಹೊಂದಿದ್ದೀರಾ? ನಾವು ಅವುಗಳನ್ನು ನಮಗೆ ನೀಡಿ ಎಂದು ವಿನಂತಿಸಿಕೊಳ್ಳುತ್ತೇವೆ. ಇವುಗಳನ್ನು ಪರಮಾಣು ಶಕ್ತಿ ಸ್ಥಾವರದ ಆವರಣದೊಳಗೆ ಬಿಡುವುದಿಲ್ಲ. ಪ್ರತಿಯೊಬ್ಬರೂ ನಿಮ್ಮ ವೈಯಕ್ತಿಕ ಗೇಟ್ ಪಾಸ್‌ಗಳನ್ನು ತೆಗೆದುಕೊಳ್ಳಿ.. (ಎಲ್ಲರೂ ತಮ್ಮ ವಸ್ತುಗಳನ್ನು ಇಲ್ಲಿಡಿ)
ದಯವಿಟ್ಟು, ಪ್ರತಿಯೊಬ್ಬರೂ ಒಬ್ಬೊಬ್ಬರಾಗಿ ಬನ್ನಿ ಮತ್ತು ನಿಮ್ಮ ಗುರುತಿನ ಪತ್ರಗಳನ್ನು ತೆಗೆದುಕೊಳ್ಳಿ.


ಈ ಮಧ್ಯೆ, ಶೇಖರ್ ಇಬ್ಬರು ಅಧಿಕಾರಿಗಳೊಂದಿಗೆ ಗೇಟಿಗೆ ತಲುಪಿದ.
ಶೇಖರ್ ಎಲ್ಲಾ ವ್ಯಕ್ತಿಗಳ ಗೇಟ್ ಪಾಸ್‌ಗಳೂ ಸಿದ್ಧವಾಗಿದೆ. ಈಗ ಅವರು ತಮ್ಮ ಬಸ್‌ನ ಬಳಿ ಹೋಗಲಿ, ನಂತರ ನೀವು ಪರಮಾಣು ಶಕ್ತಿ ಸ್ಥಾವರವನ್ನು ಪ್ರವೇಶಿಸಬಹುದು. ಮತ್ತೊಂದು ಹಂತದ ಸುರಕ್ಷತಾ ಪರಿಶೀಲನೆಯಿದ್ದು, ಅಲ್ಲಿ ನಿಮ್ಮ ವಸ್ತುಗಳನ್ನು ಸ್ಕ್ಯಾನ್ ಮಾಡಿ, ನಿಮಗೆ ಪ್ರವೇಶಿಸಲು ಅನುಮತಿ ನೀಡಲಾಗುತ್ತದೆ.
ಬಹಳ ಧನ್ಯವಾದಗಳು, ಸರ್.
ಶೇಖರ್ ಗ್ರಾಮಸ್ಥರನ್ನು ಅಧಿಕಾರಿಗೆ ಪರಿಚಯಿಸಿದ.
ಅಂಕಲ್, ಇವರು ಶ್ರೀ.ಅಮಿತ್ ಕುಮಾರ್, ಇವರು ನಮ್ಮ ಪ್ರವಾಸದ ಮಾರ್ಗದರ್ಶಿ.
ಎಲ್ಲರಿಗೂ ನಮಸ್ಕಾರ, ಕೈಗಾ ಪರಮಾಣು ಶಕ್ತಿ ಸ್ಥಾವರಕ್ಕೆ ಸುಸ್ವಾಗತ. ಒಳಗೆ ಬನ್ನಿ.
ಎಲ್ಲರೂ ಬಸ್‌ನ ಹತ್ತಿರ ಮರಳಿದರು ಹಾಗೂ ಬಸ್ ಮುಖ್ಯ ಗೇಟಿನ ಒಳಗೆ ಚಲಿಸಿತು.



ಎಲ್ಲರಿಗೂ ನಮಸ್ಕಾರ. ಈಗ ನಾವು ಹೋಗುತ್ತಿರುವ ಈ ಪ್ರದೇಶವನ್ನು ಎಕ್ಸ್‌ಕ್ಲೂಷನ್ ಜೋನ್ (ಹೊರತಾದ ವಲಯ) ಎಂದು ಕರೆಯುತ್ತೇವೆ. ಈ ಸ್ಥಳಕ್ಕೆ ಪೂರ್ವಾನುಮತಿಯಿಲ್ಲದೇ ಯಾರಿಗೂ ಪ್ರವೇಶವಿಲ್ಲ.
ಇದನ್ನು ಏಕೆ ಬಳಸಲಾಗುತ್ತದೆ?
ವಾಸ್ತವವಾಗಿ, ಇದರಲ್ಲಿ 1.6 ಕಿಲೋಮೀಟರ್ ಸ್ಥಳವಿದ್ದು, ನಾವು ಇಲ್ಲಿ ಹಸಿರು ವಾತಾವರಣ ಹಾಗೂ ದಟ್ಟ ಅರಣ್ಯವನ್ನು ನಿರ್ವಹಿಸಿದ್ದೇವೆ. ಇದು ವಿಭಿನ್ನ ಬಗೆಯ ಪಕ್ಷಿಗಳು ಮತ್ತು ಚಿಟ್ಟೆಗಳ ಆವಾಸಸ್ಥಾನವಾಗಿದೆ. ಇಲ್ಲಿನ ವಾತಾವರಣವು ಸ್ವಚ್ಛ ಹಾಗೂ ಪ್ರಾಕೃತಿಕವಾಗಿದೆ.
ವಾವ್, ಇಲ್ಲಿ ಬಹಳ ಹಸುರಾಗಿದೆ ಹಾಗೂ ನೋಡಲೂ ಬಹಳ ಸ್ವಚ್ಛವಾಗಿದೆನಾವಿಲ್ಲಿ ನಿಂತು ಪಕ್ಷಿಗಳು ಮತ್ತು ಚಿಟ್ಟೆಗಳನ್ನು ನೋಡಬಹುದೇ?
ಏಕಿಲ್ಲ? ಡ್ರೈವರ್, ದಯವಿಟ್ಟು ಬಸ್ ಅನ್ನು ಎಡಭಾಗದಲ್ಲಿ ನಿಲ್ಲಿಸಿ.
ಬಸ್ ನಿಂತಿತು ಹಾಗೂ ಎಲ್ಲರೂ ಕೆಳಗಿಳಿದು ಸುತ್ತಲಿನ ವಾತಾವರಣವನ್ನು ಅವಲೋಕಿಸತೊಡಗಿದರು.



ವಾವ್, ಎಂತಹ ಸುಂದರವಾದ ದೃಶ್ಯ!
ಬಹಳ ಸುಂದರವಾಗಿದೆ ಹಾಗೂ ಈ ಎಲ್ಲಾ ಪಕ್ಷಿಗಳನ್ನು ನೋಡಿ!


ಓಹ್, ಆ ನವಿಲು ಬಹಳ ಸುಂದರವಾಗಿದೆ! ಅದನ್ನು ನೋಡುವುದೇ ಒಂದು ಸಂತೋಷ.


ಇದು ಖಂಡಿತವಾಗಿಯೂ ಬಹಳ ಮುಖ್ಯವಾದ ವಲಯ, ಇದು ಕೇವಲ ಪಕ್ಷಿ, ಸಸ್ಯ ಮತ್ತು ಪ್ರಾಣಿಗಳನ್ನು ಸಂರಕ್ಷಿಸುವ ಸ್ಥಳವಲ್ಲ, ಜೊತೆಗೆ ಶಕ್ತಿ ಸ್ಥಾವರದಲ್ಲಿ ಯಾವುದಾದರೂ ವಿಕಿರಣದಅವಘಡಗಳು ನಡೆದರೆ ಅದರ ಪ್ರಭಾವವನ್ನೂ ಕಡಿಮೆ ಮಾಡುತ್ತದೆ.
ಓಹ್, ಅದರಿಂದಲೇ 1.6 ಕಿಲೋಮೀಟರ್ ಪರಿಧಿಯ ನಿಷೇಧಿತ ಸ್ಥಳವನ್ನು ಶಕ್ತಿ ಸ್ಥಾವರದ ಸುತ್ತಲೂ ನಿರ್ವಹಿಸಲಾಗಿದೆ.
(ಪ್ರತಿಯೊಬ್ಬರೂ ಬಸ್‌ಗೆ ಹಿಂದಿರುಗಿದರು..ಹಾಗೂ ಬಹಳ ಶೀಘ್ರವೇ ಶಕ್ತಿ ಸ್ಥಾವರದ ಎರಡನೇ ಗೇಟಿನ ಬಳಿ ಬಂದರು)
ಈಗ, ಎಲ್ಲರೂ ..ಒಬ್ಬೊಬ್ಬರಾಗಿ.ದಯವಿಟ್ಟು ಕೆಳಗಿಳಿಯಿರಿ ಇಲ್ಲಿಂದ ಮತ್ತೊಂದು ಸುರಕ್ಷತಾ ಪರಿಶೀಲನೆಯ ನಂತರ, ನಾವು ಪರಮಾಣು ಶಕ್ತಿ ಸ್ಥಾವರವನ್ನು ಪ್ರವೇಶಿಸಬಹುದು.
ಸರಿ ಸರ್, (ಎಲ್ಲರೂ ಬಸ್‌ನಿಂದ ಕೆಳಗಿಳಿದು ಹಾಗೂ ಮತ್ತೊಂದು ಸುರಕ್ಷಾ ತಪಾಸಣೆಯ ನಂತರ, ಪರಮಾಣು ಶಕ್ತಿ ಸ್ಥಾವರವನ್ನು ಪ್ರವೇಶಿಸಿದರು).
ಸುರಕ್ಷಾ ತಪಾಸಣೆಯ ಕೇಂದ್ರದ ಮೂಲಕ
12


ಅವರು ಪ್ರವೇಶದ್ವಾರದ ಒಳ ಪ್ರವೇಶಿಸಿದಾಗ, ದೂರದಿಂದಲೇ ಸಾಕಷ್ಟು ಬಹಳ ಸುಂದರವಾದ ದೃಶ್ಯಕಂಡುಬಂದಿತು ಪ್ರತಿಯೊಬ್ಬರೂ ಅದನ್ನು ನೋಡಲು ಕುತೂಹಲಿಗಳಾದರು.
ಓಹ್ ಇದು ನಿಜವಾಗಿಯೂ ಎಷ್ಟು ದೊಡ್ಡದಾಗಿ, ಭವ್ಯವಾಗಿದೆ!
ಹೌದು, ಇದು ನಿಜವಾಗಿಯೂ ತುಂಬಾ ಚೆನ್ನಾಗಿ ಕಾಣುತ್ತಿದೆ.








ನೀವು ನೋಡುತ್ತಿರುವ ವೃತ್ತಾಕಾರದ ಗೋಳದ ಹಾಗಿರುವುದು, ಪರಮಾಣು ಕಟ್ಟಡವಾಗಿದೆ (ರಿಯಾಕ್ಟರ್ ಬಿಲ್ಡಿಂಗ್) ಇದು ಪರಮಾಣು ಶಕ್ತಿ ಸ್ಥಾವರದ ಬಹುಮುಖ್ಯ ಸ್ಥಳ ಹಾಗೂ ಇಲ್ಲಿಂದ ನಿಜವಾದ ಶಕ್ತಿ ತಯಾರಿಕಾ ಪ್ರಕ್ರಿಯೆ ಆರಂಭವಾಗುತ್ತದೆ. ಮುಖ್ಯವಾಗಿ, ಇದು ಎರಡು ಗೋಡೆಗಳನ್ನು ಹೊಂದಿದೆ- ಮೊದಲನೆಯ ಗೋಡೆ ಹಾಗೂ ಎರಡನೆಯ ಗೋಡೆಗಳೆರಡನ್ನೂ ಕಾಂಕ್ರೀಟ್‌ನಿಂದ ಮಾಡಲ್ಪಟ್ಟಿದ್ದು, ಬಹಳ ಬಲಿಷ್ಟವಾಗಿದೆ.

ನಾವು ಗೋಡೆಗಳನ್ನು ಒಳಭಾಗದಿಂದ ನೋಡಲು ಸಾಧ್ಯವಿದೆಯೇ?






ಏಕಿಲ್ಲ? ಖಂಡಿತ ಇದು ಬಹಳ ಸುಲಭ. ಇದರ ಒಳಗೆ ಹೋಗುವ ಮೊದಲು ನೀವು ವಿಶೇಷವಾಗಿ ತಯಾರಿಸಲ್ಪಟ್ಟ ಬಟ್ಟೆಗಳು ಮತ್ತು ಕೈ ಗವಸುಗಳನ್ನು ಧರಿಸಬೇಕಷ್ಟೇ.
ಒಳಗೆ ಬನ್ನಿನಾನು ನಿಮ್ಮನ್ನು ಇವುಗಳ ಒಳಗೆ ಕರೆದುಕೊಂಡು ಹೋಗುತ್ತೇನೆ.
ಎಲ್ಲರೂ ಈಗ ವಿಶೇಷ ಬಟ್ಟೆಗಳು ಕೈಗವಸಗರು  ಹಾಗೂ ಟಿ.ಎಲ್.ಡಿ ಡೋಸಿಮೀಟರ್ ಎಂದು ಕರೆಯುವ ಉಪಕರಣಗಳನ್ನು ಧರಿಸಿ, ಒಳಗೆ ಹೋಗಲು ತಯಾರಾಗಿದ್ದಾರೆ.
ಸರ್, ಎರಡು ಗೋಡೆಗಳ ಪದರಗಳು ಏಕಿವೆ ಎಂದು ದಯವಿಟ್ಟು ವಿವರಿಸುತ್ತೀರಾ? ನಮ್ಮ ಮನೆಯ ಗೋಡೆಗಳು ಕೇವಲ ಒಂದೇ ಗೋಡೆಯನ್ನು ಹೊಂದಿರುತ್ತದೆ.
ಒಳ್ಳೆಯ ಪ್ರಶ್ನೆ ರಾಜು.. ಎರಡು ಗೋಡೆಗಳೂ ಸುರಕ್ಷತಾ ಕಾರಣಕ್ಕಾಗಿ ನಿರ್ಮಿಸಲಾಗಿದೆ. ಯಾವಾದಾದರೂ ಅಪಘಾತದ ಸಂದರ್ಭದಲ್ಲಿ, ಮೊದಲ ಮುಖ್ಯ ಗೋಡೆಯು ವಿಕಿರಣವನ್ನು ತಡೆಯುತ್ತದೆ. ಕೆಲವು ಅಪರೂಪದ ಸಂದರ್ಭಗಳಲ್ಲಿ, ಸ್ವಲ್ಪ ವಿಕಿರಣವು ಮೊದಲ ಗೋಡೆಯಿಂದ ಹಾದುಹೋದರೆ, ಎರಡನೇ ಗೋಡೆಯು ವಿಕಿರಣವನ್ನು ಸಂಪೂರ್ಣ ತಡೆಯುತ್ತದೆ..ಜೊತೆಗೆ, ಎರಡು ಗೋಡೆಗಳ ನಡುವೆ ಖಾಲಿ ಸ್ಥಳವಿದ್ದು, ಇದು ವಿಕಿರಣವನ್ನು ಮತ್ತೂ ತಡೆಯುತ್ತದೆ.ನಾವು ಎರಡು ಗೋಡೆಗಳನ್ನು ಏಕೆ ಮಾಡಿದ್ದೇವೆಂದು ನಿಮಗೆ ಈಗ ಅರ್ಥವಾಯಿತು ಎಂದುಕೊಳ್ಳುತ್ತೇನೆ.
ಈ ಗೋಡೆಗಳು ಬಹಳ ಬಲಿಷ್ಠವಾಗಿದೆಯೇ? ಅವು ಮುರಿಯುತ್ತವೆಯೇ?


ಹಾ..ಹಾ..ಹಾ..(ನಗುತ್ತಲೇ).. ಆತ್ಮೀಯರೇ, ಈ ಗೋಡೆಗಳನ್ನು ಎಷ್ಟು ಬಲಿಷ್ಠವಾಗಿ ಕಟ್ಟಲಾಗಿದೆ ಎಂದರೆ, ಏರೋಪ್ಲೇನ್‌ಗಳೂ ಇದಕ್ಕೆ ಡಿಕ್ಕಿ ಹೊಡೆದರೆ, ಈ ಗೋಡೆಗಳಿಗೆ ಅಷ್ಟೇನೂ ಹಾನಿಯಾಗುವುದಿಲ್ಲ. ಮತ್ತೊಂದು ವಿಷಯ. ಮೊದಲ ಗೋಡೆಯ ದಪ್ಪ, ಸುಮಾರು 1Mನಷ್ಟು ಇದೆ.
ಓಹ್!
ಈಗ, ರಿಯಾಕ್ಟರ್ ಬಿಲ್ಡಿಂಗ್‌ನ ನೋಡುತ್ತಾ, ಕ್ಯಾಲೆಂಡ್ರಿಯಾವನ್ನು ತಲುಪಿದರು, ಅಲ್ಲಿ ಅವರು ಒಂದು ಸಣ್ಣ ಗಾಜಿನ ಕಿಟಕಿಯಿದ್ದು, ಪ್ರತಿಯೊಬ್ಬರೂ  ಒಳಭಾಗಕ್ಕೆ ಕುತೂಹಲದಿಂದ ನೋಡಲು ಪ್ರಯತ್ನಿಸಿದರು.
ಏನಿದು? ಇಲ್ಲಿ ನಾವು ಅನೇಕ ರಂಧ್ರಗಳನ್ನು ನೋಡುತ್ತಿದ್ದೇವೆ!
ಹೌದು! ಇದರ ಒಳಗಿರುವ ವೃತ್ತಾಕಾರದ ವಸ್ತು ಯಾವುದು?


ಹೃದಯವು ನಮ್ಮ ಶರೀರಕ್ಕೆ ಬಹಳ ಮುಖ್ಯವಾದಂತೆಯೇ, ಪರಮಾಣು ಶಕ್ತಿ ಸ್ಥಾವರಕ್ಕೆ ಕ್ಯಾಲೆಂಡ್ರಿಯಾ ಎಂದು ಕರೆಯಲ್ಪಡುವ ಈ ಭಾಗ ಮುಖ್ಯವಾಗಿದೆ. ಇದಕ್ಕೆ ನಾವು ಯುರೇನಿಯಂ ಎನ್ನುವ ಇಂಧನವನ್ನು ತುಂಬುತ್ತೇವೆ. ಯುರೇನಿಯಂ ಕಣಗಳ ಒಡೆಯುವಿಕೆ ಇಲ್ಲಿ ಆರಂಭವಾಗುತ್ತದೆ, ಇದು ಬೃಹತ್ ಪ್ರಮಾಣದ ಶಕ್ತಿಯ ಬಿಡುಗಡೆಗೆ ನೆರವಾಗಿ, ಸುತ್ತಲಿನ ನೀರಿಗೆ ಶಾಖಗೊಳಿಸುತ್ತದೆ. ಅಂತಿಮವಾಗಿ, ಬಾಯ್ಲರ್‌ನಲ್ಲಿರುವ ನೀರನ್ನು ಶಾಖ ನೀಡಿ ಆವಿಯನ್ನು ಉತ್ಪಾದಿಸುತ್ತದೆ. ಈ ಆವಿಯು ಟರ್ಬೈನ್‌ನ ಬ್ಲೇಡ್‌ಗಳು ಸುತ್ತುವಂತೆ ಮಾಡಿ, ಅಂತಿಮವಾಗಿ ಇದನ್ನು ಸಂಪರ್ಕಿಸಿದ ಜನರೇಟರ್‌ನಿಂದ ವಿದ್ಯುತ್ ಉತ್ಪಾದಿಸಲು ನೆರವಾಗುತ್ತದೆ. ಜನರೇಟರ್‌ಗಳು ಗ್ರಿಡ್‌ಗಳಿಗೆ ಸಂಪರ್ಕಿಸಲ್ಪಟ್ಟಿರುತ್ತದೆ. ನಂತರ ವಿದ್ಯುತ್ ಜಾಲದ ಮೂಲಕ ಟ್ರಾನ್ಸ್ ಫಾರ್ಮರ್ ಮತ್ತು ವೈರ್‌ನ ಜಾಲಗಳಿಂದ ಪ್ರತಿ ಮನೆಗೂ ವಿತರಣೆಯಾಗುತ್ತದೆ.
ಪ್ರತಿಯೊಬ್ಬರೂ ಆತ ಹೇಳುವುದನ್ನು ಗಮನದಿಂದ ಕೇಳುತ್ತಿದ್ದರು.
ಸರ್, ನನ್ನದೊಂದು ಪ್ರಶ್ನೆಯಿದೆ; ವಿದ್ಯುತ್ ಅನ್ನು ಉತ್ಪಾದಿಸುವ ಪ್ರಕ್ರಿಯೆಯಲ್ಲಿ ಇಂಧನವು ಬರಿದಾದಾಗ, ಇಲ್ಲಿ ಯಾರೂ ಪ್ರವೇಶಿಸುವಂತಿಲ್ಲವಾದ್ದರಿಂದ, ಇಂಧನವನ್ನು ಹೇಗೆ ಮರು ಭರ್ತಿ ಮಾಡುವುದು?
ಇದನ್ನು ಕೇಳಿ ನನಗೆ ಬಹಳ ಸಂತೋಷವಾಯಿತುನೀವು ಕುತೂಹಲಕಾರಿಯಾದ ಪ್ರಶ್ನೆಯನ್ನು ಕೇಳಿದ್ದೀರಿ. ವಾಸ್ತವವಾಗಿ, ಈ ಕಾರ್ಯವನ್ನು ಗಣಕೀಕೃತಗೊಳಿಸಲಾಗಿದ್ದು, ರೋಬೋಟ್‌ಗಳ ಸಹಾಯದಿಂದ ನಾವು ಇಂಧನವನ್ನು ತುಂಬಲು ಸಾಧ್ಯವಾಗುತ್ತದೆ ಏಕೆಂದರೆ ಇಲ್ಲಿ ಮಾನವ ಪ್ರವೇಶ ನಿಷಿದ್ಧವಾಗಿದೆ.
ಇದರ ನಂತರ, ಅಧಿಕಾರಿಯು ಎಲ್ಲರನ್ನೂ ರಿಯಾಕ್ಟರ್ ಬಿಲ್ಡಿಂಗ್‌ನಿಂದ ಹೊರಗೆ ಕರೆದುಕೊಂಡು ಬಂದು, ಕಲುಷಿತ ಪತ್ತೆ ಮಾಡುವ ಯಂತ್ರದ ಬಳಿಗೆ ಕರೆತಂದರು.



8.3%
ಏನಿದು?
ಲಕ್ಷ್ಮೀ ಆಂಟಿ, ರಿಯಾಕ್ಟರ್ ಬಿಲ್ಡಿಂಗ್‌ನಲ್ಲಿ ಕೆಲಸ ಮಾಡಿ, ಹಿಂತಿರುಗವಾಗ, ಪ್ರತಿಬಾರಿಯೂ, ಈ ಯಂತ್ರದ ಮೂಲಕ ಹೊರಬರುತ್ತೇವೆ ಹೀಗೆ ಮಾಡುವುದರಿಂದ, ನಮ್ಮ ಶರೀರದ ಭಾಗ ಅಥವಾ ಬಟ್ಟೆಯು ಕಲುಷಿತವಾಗಿದೆಯೇ (ಅಣುವಿಕಿರಣದಿಂದ) ಇಲ್ಲವೇ ಎಂದು ತಿಳಿಯಬಹುದು ಮೊದಲು ನಾವು ವಿಶೇಷ ವಿಧದ ಬಟ್ಟೆಗಳು ಮತ್ತು ಕೈಗವಸುಗಳನ್ನು ಸುರಕ್ಷಾ ಮಾನದಂಡವಾಗಿ ಬಳಸಿದ್ದೆವು ಎನ್ನುವುದು ನಿಮಗೆ ನೆನಪಿರಬಹುದು.
8.3%
ಹೌದು, ನೆನಪಿದೆ.
ಈಗ, ನೀವು ಇವುಗಳನ್ನು ತೆಗೆದು, ಒಬ್ಬೊಬ್ಬರಾಗಿ ಪತ್ತೆಯಂತ್ರದ ಮೂಲಕ ಹಾದುಹೋಗಿ ಇದರಿಂದಾಗಿ ಯಾವುದಾದರೂ ಕಲುಷಿತವಿದೆಯೇ ಎಂದು ತಿಳಿಯಬಹುದು.
ಇದರ ನಂತರ, ಪ್ರತಿಯೊಬ್ಬರೂ ವಿಶೇಷ ಬಟ್ಟೆಗಳು ಮತ್ತು ಸಾಧನಗಳನ್ನು ಒಂದು ಜಾಗದಲ್ಲಿರುವ ಪೆಟ್ಟಿಗೆಯಲ್ಲಿ ಹಾಕುತ್ತಾರೆ
MAPS
ಈಗ ಒಬ್ಬೊಬ್ಬರಾಗಿ ಪತ್ತೆಯಂತ್ರದ ಮೂಲಕ ಹಾದುಹೋಗಿ.
ಇಲ್ಲಿ ನೀವು ನೋಡುತ್ತಿರುವ ಹಸಿರು ದೀಪವು ಯಾವ ಕಲುಷಿತವೂ ಇಲ್ಲ ಎಂದು ಸೂಚಿಸುತ್ತದೆ.
ಹೌದು, ಇದು ಬಹಳ ಸುರಕ್ಷಿತವಾಗಿದೆ.. ವರ್ಷಗಳಿಂದ, ಇಲ್ಲಿ ಕೆಲಸ ಮಾಡುತ್ತಿರುವ ಜನರು ಸುರಕ್ಷಿತವಾಗಿದ್ದಾರೆ ಈಗ ಅದು ನನಗೆ ತಿಳಿಯಿತು.
ಖಂಡಿತನೀನು ಹೇಳಿದ್ದು ಸರಿ, ನಾನು ನಿಮ್ಮನ್ನು ಟರ್ಬೈನ್ ಹಾಲ್ ಗೆ ಕರೆದುಕೊಂಡು ಹೋಗುತ್ತೇನೆ (ಪ್ರತಿಯೊಬ್ಬರೂ ಟರ್ಬೈನ್ ಹಾಲ್‌ನ ಕಡೆ ಚಲಿಸಿದರು).


ಇದನ್ನು ನೋಡಿ, ಇದು ಟರ್ಬೈನ್ ಹಾಲ್. ಇಲ್ಲಿ ಟರ್ಬೈನ್‌ಗಳ ಸಹಾಯದಿಂದ ಜನರೇಟರ್‌ಗಳ ಮೂಲಕ ವಿದ್ಯುತ್ ಉತ್ಪಾದಿಸಲಾಗುತ್ತದೆ.
ಓಹ್, ಇದು ಎಷ್ಟು ದೊಡ್ಡದಿದೆ! ಈ ವಸ್ತುಗಳನ್ನೂ ನೋಡಲು ನಾವೆಲ್ಲಾ ನಿಜವಾಗಿಯೂ ಕುತೂಹಲಿಯಾಗಿದ್ದೇವೆ.
ಪ್ರತಿಯೊಬ್ಬರೂ ಒಬ್ಬರನ್ನೊಬ್ಬರು ಆಶ್ಚರ್ಯಚಕಿತರಾಗಿ ನೋಡುತ್ತಿದ್ದರು.
ಇಲ್ಲಿಂದ ನಾವು ಕಂಟ್ರೋಲ್ ರೂಂ ಕಡೆಗೆ (ನಿಯಂತ್ರಣ ಕೊಠಡಿ) ಹೋಗೋಣ.
(ಕಂಟ್ರೋಲ್ ರೂಮ್‌ನ ಒಳಭಾಗದ ದೃಶ್ಯ..... ಇಲ್ಲಿ ಕೆಲಸ ಮಾಡುವವರ ದೃಶ್ಯ.
ಇದು ಪರಮಾಣು ಶಕ್ತಿ ಸ್ಥಾವರದ ನಿಯಂತ್ರಣಾ ಕೊಠಡಿ. ಎಲ್ಲಾ ಪ್ರಕ್ರಿಯೆಗಳನ್ನೂ ಇಲ್ಲಿಂದಲೇ ನಿಯಂತ್ರಿಸಲಾಗುತ್ತದೆ.




ಇಲ್ಲಿರುವ ಹಸಿರು, ಕೆಂಪು, ಹಳದಿ ಸೂಚಕ ದೀಪಗಳ ಉದ್ದೇಶವೇನು?
ವಸಂತರವರೆ, ಇದು ವಿಭಿನ್ನ ಮಾನದಂಡಗಳನ್ನು ನಿಯಂತ್ರಿಸುವ ಮತ್ತು ಶಕ್ತಿಗೆ ಸಂಬಂಧಿಸಿದ ಅಳತೆಗಳನ್ನು ಎಂದರೆ ಎಷ್ಟು ಶಕ್ತಿ ಉತ್ಪಾದನೆಯಾಗುತ್ತದೆ ಅದರ ನಿಯಂತ್ರಣ ಹೇಗಿದೆ... ಇತ್ಯಾದಿ ವಿಷಯಗಳನ್ನು ದಾಖಲಿಸುವದಾಗಿದೆ. ಕ್ಲಿಷ್ಟ ಪರಿಸ್ಥಿತಿಗಳಲ್ಲಿ, ಶಕ್ತಿ ಸ್ಥಾವರವನ್ನು ಸ್ಥಗಿತಗೊಳಿಸಬೇಕಾದ ಸಂದರ್ಭದಲ್ಲಿ, ಅದನ್ನು ಇಲ್ಲಿಂದಲೇ ಮಾಡಲಾಗುತ್ತದೆ. ಆದ್ದರಿಂದ ಶಕ್ತಿ ಸ್ಥಾವರವು ಎಲ್ಲಾ ಸಮಯದಲ್ಲೂ ಸುರಕ್ಷಿತವಾಗಿರುತ್ತದೆ.
ಇಲ್ಲಿ ಯಾವಾಗಲೂ ಯಾರಾದರೂ ಇರುತ್ತಾರೆಯೇ?
ಹೌದು, ನುರಿತ ತರಬೇತುದಾರರಾದ ಎಂಜಿನಿಯರ್‌ಗಳು ಮತ್ತು ಅಧಿಕಾರಿಗಳು ಇಲ್ಲಿ 24 ಗಂಟೆಯೂ ಕೆಲಸ ನಿರ್ವಹಿಸುತ್ತಾರೆ.. ಜೊತೆಗೆ, ಅವರು ಇಲ್ಲಿಂದಲೇ ಸ್ಥಾವರಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ನಿಯಂತ್ರಿಸುತ್ತಾರೆ. ಈಗ ನಾನು ನಿಮ್ಮನ್ನು ಹೊರಗೆ ಕರೆದುಕೊಂಡು ಹೋಗುತ್ತೇನೆ.
ಅಮಿತ್ ಕುಮಾರ್ ಎಲ್ಲಾ ಸಂದರ್ಶಕರೊಂದಿಗೆ ಹೊರಗೆ ಬಂದರು.



ಈ ಪ್ರಕ್ರಿಯೆಯಲ್ಲಿ ಯಾವುದಾದರೂ ತ್ಯಾಜ್ಯ ಉತ್ಪಾದನೆಯಾಗುತ್ತದೆಯೇ? ಅದಕ್ಕೆ ಏನಾಗುತ್ತದೆ ? ಕೆಂದರೆ, ಇಂತಹ ತ್ಯಾಜ್ಯದಲ್ಲೂ ಕೂಡ ಹೆಚ್ಚಿನ ವಿಕಿರಣ ಇರುತ್ತದೆ ಎಂದು ನಾವು ಕೇಳಿದ್ದೇವೆ.


ವಿದ್ಯುತ್ ಶಕ್ತಿಯನ್ನು ಉತ್ಪಾದಿಸಲು ಬಳಸಿದ ಮೇಲೆ, ಆ ಇಂಧನವನ್ನು ಅನೇಕ ವರ್ಷಗಳವನೆಗೆ, ಆಳವಾದ ನೀರಿನ ಸಂಗ್ರಾಹದಲ್ಲಿ ಸಂರಕ್ಷಿಸುತ್ತೇವೆ. ಏಕೆಂದರೆ, ಇದರಿಂದ ವಿಕಿರಣವು ಹರಡುವುದಿಲ್ಲ... ನಂತರ ನಾವು ಇದನ್ನು ಪುನಃ ಬಳಸಲು ಉಪಯೋಗಿಸುತ್ತೇವೆ. ಹಾಗೂ ನೀವು ಕಲ್ಲಿದ್ದಲು ಹಾಗೂ ಇತರ ಮೂಲಕಳನ್ನು ಹೋಲಿಸಿದಾಗ ಅವುಗಳ ತ್ಯಾಜ್ಯ ಉತ್ಪನ್ನಗಾಳಾದ $CO_2$, $SO_2$, $NO_2$ ಇತ್ಯಾದಿಗಳು ಪರಿಸರಕ್ಕೆ ಅಧಿಕ ಹಾನಿಕಾರಕವಾಗಿದೆ.


ಜೊತೆಗೆ, ನಾವು ನಮ್ಮ ದೇಶದಲ್ಲಿ ಇಂತಹ ತ್ಯಾಜ್ಯವನ್ನು ವಿಲೇವಾರಿ ಮಾಡಲು ಎಲ್ಲಾ ವಿಧದ ಅತ್ಯಾಧುನಿಕ ತಂತ್ರಜ್ಞಾನವನ್ನು ಹೊಂದಿದ್ದೇವೆ. ನಾವು ಇಂತಹ ತ್ಯಾಜ್ಯವನ್ನು ಬಿಡುಗಡೆಯಾದಾಗ, ಇವುಗಳನ್ನು ಸಣ್ಣ ಪ್ಯಾಕೆಟ್‌ಗಳಲ್ಲಿ ತುಂಬಲು ಮತ್ತು ವರ್ಷಗಳವರೆಗೆ ಕಾಂಕ್ರೀಟ್ ಬ್ಲಾಕ್‌ಗಳಲ್ಲಿಡಲು ಸಾಧ್ಯವಾಗುವ ಅತ್ಯಾಧುನಿಕ ಯಂತ್ರಗಳನ್ನು ಬಳಸುತ್ತೇವೆ. ನಂತರ ಇದನ್ನು ಮತ್ತೆ ಭೂಮಿಯಲ್ಲಿ ಸಂರಕ್ಷಿಸಿ ಇಟ್ಟಾಗ, ವಾತಾವರಣಕ್ಕೆ ಯಾವುದೇ ವಿಕಿರಣ ಹರಡುವುದಿಲ್ಲನಿಮಗೆ ಅರ್ಥವಾಯಿತೆಂದುಕೊಳ್ಳುತ್ತೇನೆ.


ಹೌದು ಸರ್


ಬನ್ನಿ.ಪರಮಾಣು ಶಕ್ತಿ ಸ್ಥಾವರಕ್ಕೆ ಬಳಸುವ ನೀರನ್ನು ತೆಗೆದುಕೊಳ್ಳುವ ಸ್ಥಳಕ್ಕೆ ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ.


ಎಲ್ಲರೂ ನೀರನ್ನು ತೆಗೆದುಕೊಳ್ಳುವ ವ್ಯವಸ್ಥೆಯಿರುವ ಸ್ಥಳಕ್ಕೆ ಹೋದರು .


ಈಗ ನೀವು ಸ್ಥಾವರಕ್ಕೆ ಬಳಸುವ ನೀರಿನ ಮೂಲವನ್ನು ನೋಡುತಿದ್ದೀರಿ. ಅಂತಿಮವಾಗಿ ನೀರನ್ನು ಮತ್ತೆ ಇದೇ ನೀರಿಗೆ ಬಿಡುತ್ತೇವೆ.
ಆದ್ದರಿಂದ, ಇದೇ ನೀರನ್ನು ನದಿ, ಕೆರೆ ಅಥವಾ ಸಮುದ್ರಕ್ಕೆ ಬಿಡುಗಡೆ ಮಾಡುವುದು? ಅದು ಬಿಸಿ ನೀರಾಗಿರಬಹುದು, ಅಲ್ಲವೇ?
ಇದು ಬಹುಶಃ ಮೀನು ಮತ್ತು ಇತರ ಜಲಚರಗಳನ್ನು ಕೊಲ್ಲಬಹುದು!
ನೀರಿನಲ್ಲಿಯೂ ವಿಕಿರಣವಿರಬಹುದು, ಅಲ್ಲವೇ?
ನೀವು ಕುಡಿಯಲೂ ಇದೇ ನೀರನ್ನು ಉಪಯೋಗಿಸುತ್ತೀರಾ?
23


(ರಾಜು ನೀರಿನಲ್ಲಿ ಕೆಲವು ಮೀನುಗಳು ಈಜುತ್ತಿರುವುದನ್ನು ಬಹಳ ಹತ್ತಿರದಿಂದ ನೋಡಿದನು.)
ಕ್ಷಮಿಸಿ, ಆದರೆ ದಯವಿಟ್ಟು ಒಂದು ಬಾರಿಗೆ ಒಂದೇ ಪ್ರಶ್ನೆಯನ್ನು ಕೇಳಿ. ನಾನು ಒಂದರ ನಂತರ ಮತ್ತೊಂದಕ್ಕೆ ಉತ್ತರಿಸುತ್ತೇನೆ. ಪರಮಾಣು ಸ್ಥಾವರದಿಂದ ಬಿಡುಗಡೆಯಾಗುವ ನೀರು ಸ್ವಲ್ಪ ಬೆಚ್ಚಗಿರುವುದು ಸ್ವಾಭಾವಿಕ, ಆದರೆ, ಇದು ಕೂಲಿಂಗ್ ಟವರ್‌ಗಳಲ್ಲಿ ಅಥವಾ ಸ್ವಲ್ಪ ದೂರದವರೆಗಿನ ಕಾಲುವೆಯಲ್ಲಿ ತಂಪಾದ ನಂತರವಷ್ಟೇ ನೀರಿನ ಮೂಲಕ್ಕೆ ಬಿಡುಗಡೆ ಮಾಡಲಾಗುತ್ತದೆಆದ್ದರಿಂದ ಇದು ಮೀನು ಅಥವಾ ಇತರ ಯಾವುದೇ ಜಲಚರದ ಮೇಲೆ ಪ್ರಭಾವ ಬೀರುವುದಿಲ್ಲ. ಮೇಲಾಗಿ, ಸ್ವಲ್ಪ ಹತ್ತಿರ ಬಂದು ನೋಡಿ, ಎಷ್ಟೊಂದು ಮೀನುಗಳು ಇಲ್ಲಿ ಇವೆ ಎಂದು. ಇದರೊಂದಿಗೆ, ಇಲ್ಲಿ ಯಾವುದೇ ವಿಕಿರಣ ಇಲ್ಲ ಎಂದು ಗಮನಿಸಬೇಕು.
ಖಂಡಿತವಾಗಿಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ನಾವೆಲ್ಲಾ ಒಂದೇ ನೀರನ್ನು ಕುಡಿಯುತ್ತೇವೆ.. ಹಾಗೆಯೇ, ಇದೂ ಸಹ ಇತರ ನೀರಿನಂತೆಯೇ ಸಾಧಾರಣ ನೀರುನೀವೆಲ್ಲಾ ನಿಮ್ಮ ಮನೆಯಲ್ಲಿ ಶುದ್ಧೀಕರಿಸಿದ ನೀರನ್ನು ಕುಡಿಯುವಂತೆಯೇ. ಶುದ್ಧೀ ಕರಿಸಿದ ನಂತರಈ ನೀರೂ ಸಹ ಕುಡಿಯುವ ನೀರು. ನಂತರ, ಇದು ನಿಮ್ಮ ವಸತಿ ಪ್ರದೇಶ ಹಾಗೂ ಇತರೆ ಹತ್ತಿರದ ಪ್ರದೇಶಗಳಿಗೆ ತಲುಪುತ್ತದೆ. ಅರ್ಥವಾಯಿತೇ?
ಹೌದು, ನಾವು ಅನೇಕ ಮೀನುಗಳನ್ನು ನೋಡಿದೆವುಇದರ ಅರ್ಥ, ಕೆಲವು ಜನರು ಸುತ್ತಲೂ ಸುಳ್ಳು ವದಂತಿಗಳನ್ನು ಹರಡುತ್ತಾರೆ.
ಎಂದರೆ, ಮೊದಲು ನಾವು ಪಡೆದ ಶುದ್ಧ ನೀರು ಇಲ್ಲಿಯದು ಎಂದು ಅರ್ಥವೇ?
ಹೌದು, ಅದು ಇಲ್ಲಿಂದಲೇ ನೀವು ಸರಿಯಾಗಿ ಹೇಳಿದಿರಿ ಹಾ..ಹಾ..ಹಾ! (ನಗು)


ಮತ್ತೊಂದು ವಿಷಯ, ನಾವು ಸಮುದ್ರದ ಹತ್ತಿರ ಅದರ ಎತ್ತರಕ್ಕೆ ಮನೆ ಕಟ್ಟಿಸುವಂತೆಯೇ, ಪರಮಾಣು ಸ್ಥಾವರವನ್ನೂ ಎತ್ತರಕ್ಕೆ ಕಟ್ಟುತ್ತೇವೆ. ಇದು ನೀರಿನ ಅಲೆಗಳಿಂದ ಸ್ಥಾವರಕ್ಕೆ ಸುರಕ್ಷತೆಯನ್ನು ಒದಗಿಸುತ್ತದೆ, ಆದ್ದರಿಂದ ನಾವು ಸುನಾಮಿಗಳ ಬಗ್ಗೆಯೂ ಚಿಂತಿಸಬೇಕಾಗಿಲ್ಲ.
ನೀವು ಹೇಳಿದ್ದು ಸರಿ ಸರ್ ಎಲ್ಲವೂ ನಮ್ಮ ಕಣ್ಣ ಮುಂದೆಯೇ ಇದೆ.
ಪರಮಾಣು ಶಕ್ತಿ ಸ್ಥಾವರದ ಪ್ರವಾಸ ಈಗ ಮುಕ್ತಾಯವಾಯಿತು. ನಾನು ಈಗ ನಿಮ್ಮನ್ನು ಕಾಲೋನಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ಕರೆದುಕೊಂಡು ಹೋಗುತ್ತೇನೆ. ಆದರೆ, ಅದಕ್ಕೂ ಮೊದಲು, ನೀವು ಅತ್ಯಂತ ಸಂತೋಷಪಡುವ ಒಂದು ಸ್ಥಳಕ್ಕೆ ಕರೆದುಕೊಂಡು ಹೋಗುತ್ತೇನೆ.
ಎಲ್ಲರೂ ಅಲ್ಲಿಂದ ಹೊರಟರು ಹಾಗೂ ಸ್ವಲ್ಪ ದೂರದಲ್ಲಿ ಒಂದು ದೋಣಿಯನ್ನು ನೋಡಿದರು, ಅಲ್ಲಿ ಕೆಲವು ಮೀನುಗಾರರು ಮೀನುಗಾರಿಕೆಯ ಚಟುವಟಿಕೆಯಲ್ಲಿ ತೊಡಗಿದ್ದರು.
ಹೇಗಿದ್ದೀರಿ ನಂದು? ನೀವು ಇತ್ತೀಚೆಗೆ ಹೆಚ್ಚು ಮೀನುಗಳನ್ನು ತೆಗೆಯುತ್ತಿದ್ದೀರಿ, ಅಲ್ಲವೇ?
ನಮಸ್ಕಾರ ಸರ್, ಹೌದು, ಇದರ ಹೊಗಳಿಕೆಯೆಲ್ಲಾ ನಿಮಗೆ ಸಲ್ಲಬೇಕು. ಸರ್, ನೀವು ನಮಗೆ ಮೀನುಗಾರಿಕೆಗೆ ದೋಣಿಗಳನ್ನು ನೀಡಿರದಿದ್ದರೆ, ನಾವು ಹಸಿವಿನಿಂದ ಇರಬೇಕಿತ್ತು. ನಾವೆಲ್ಲಾ ನಿಮಗೆ ಚಿರಋಣಿಗಳು.


ಪರವಾಗಿಲ್ಲ. ಈ ಗ್ರಾಮಸ್ಥರು ಜಗದೀಶ್‌ಪುರದ ಹಳ್ಳಿಯವರು, ಹಾಗೂ ನಿಮ್ಮ ದೋಣಿಯಲ್ಲಿ ಒಂದು ಸುತ್ತು ಹೋಗಲು ಬಯಸಿದ್ದಾರೆ ನಾನು ಅವರಿಗೆ ತೋಟದಲ್ಲಿರುವ ಮಾವಿನಹಣ್ಣು ಮತ್ತು ಇತರ ಹಣ್ಣುಗಳನ್ನು ತೋರಿಸುತ್ತೇನೆ. ನೀವು ಸಿದ್ಧರಿದ್ದೀರಾ?
ಹೌದು ಸರ್, ಬನ್ನಿ.
ವಸ್ತುಗಳಒಂದು ಸುಂದರ ತೋಟ. ಮಾವಿನಹಣ್ಣು, ದಾಳಿಂಬೆ, ಬಾಳೆಹಣ್ಣು, ಕರಬೂಜ ಇತ್ಯಾದಿ ವಿಭಿನ್ನ ಹಣ್ಣುಗಳಿಂದ ತುಂಬಿರುವ  ಅನೇಕ ಮರಗಳಿವೆ.
ನಾವೆಲ್ಲಿದ್ದೇವೆ? ಇದು ಸ್ವರ್ಗದಂತಿದೆ, ವಾವ್! ಮಾವಿನಹಣ್ಣು, ದಾಳಿಂಬೆ, ಬಾಳೆಹಣ್ಣು ಮತ್ತು ಕರಬೂಜ.ಅದ್ಭುತವಾಗಿದೆ! ಅನೇಕ ಹಣ್ಣಿನ ಮರಗಳು..ನಾವೀಗಾಗಲೇ ಹಸಿದಿದ್ದೇವೆ.


ನಾವೆಲ್ಲಾ ಈಗ, ಈ ಹಣ್ಣುಗಳ ಸ್ವಾದವನ್ನು ನೋಡೋಣ.
(ಕೆಲವು ಮಾವಿನಹಣ್ಣುಗಳನ್ನು ತಿನ್ನುವಾಗ) ವಾವ್, ಇದು ಬಹಳ ಸಿಹಿಯಾಗಿದ್ದು, ರಸಭರಿತ ಹಾಗೂ ರುಚಿಯಾಗಿದೆ.ಇದು ನಿಜವಾಗಿಯೂ ಚೆನ್ನಾಗಿದೆ!
ನಾನು ಕೇವಲ ಬಾಳೆಹಣ್ಣುಗಳನ್ನು ಸೇವಿಸುತ್ತೇನೆ.
ಆದರೆ ಸರ್, ಪರಮಾಣು ಸ್ಥಾವರವು ಇಷ್ಟು ಹತ್ತಿರವಿದ್ದೂ, ಎಂದರೆ, ನಾವು ಇಲ್ಲಿ ಅನೇಕ ಹಣ್ಣುಗಳನ್ನು ನೋಡಿದೆವು, ಆದರಲ್ಲೂ ರಸಭರಿತ ಹಣ್ಣುಗಳು! ವಿಕಿರಣವು ಇದರ ಮೇಲೆ ಏಕೆ ಪರಿಣಾಮ ಬೀರುವುದಿಲ್ಲ?
ಹೌದು, ಇದನ್ನೇ ನಾವು ನಿಮಗೆ ವಿವರಿಸಬೇಕೆಂದುಕೊಂಡಿದ್ದೆವು. ಪರಮಾಣು ಶಕ್ತಿ ಸ್ಥಾವರದ ಸುತ್ತಲಿನ ಪರಿಸರವು ಖಂಡಿತವಾಗಿಯೂ ಸ್ವಚ್ಛ ಹಾಗೂ ಹಸಿರಾಗಿದೆ ಹಾಗೂ ಇದು ಹಣ್ಣು ಮತ್ತು ತೋಟದ ಮೇಲೆ ಯಾವುದೇ ಪರಿಣಾಮವನ್ನೂ ಬೀರುವುದಿಲ್ಲ. ಕಾಲಕಾಲಕ್ಕೆ, ನಾವು ಇವುಗಳ ಮಾದರಿಗಳನ್ನು ತೆಗೆದುಕೊಂಡು, ನಮ್ಮ ಪ್ರಯೋಗಾಲಯದಲ್ಲಿ ಪರಿಶೀಲನೆಗಾಗಿ ಕಳುಹಿಸುತ್ತೇವೆ, ಇದರಿಂದಾಗಿ, ನಾವು ಇದರ ಶುದ್ಧತೆಯ ಬಗ್ಗೆ ಭರವಸೆ ನೀಡುತ್ತೇವೆ. ಇದರೊಂದಿಗೆ, ತೋಟಗಾರಿಕೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಬಳಸುವುದರಿಂದ ಇಲ್ಲಿ ಉತ್ಪಾದಿಸುವ ಹಣ್ಣುಗಳ ಗುಣಮಟ್ಟವನ್ನು ಸುಧಾರಿಸಲು ಸಾಧ್ಯವಾಗುತ್ತದೆ. ನೀವು ಈಗಾಗಲೇ ಸ್ಥಾವರವನ್ನು ನೋಡಿರುವುದರಿಂದ, ಅಲ್ಲಿ ಯಾವುದೇ ವಿಕಿರಣ ಅಥವಾ ಕಲುಷಿತವಿರಲಿಲ್ಲ, ಇನ್ನು ಇಲ್ಲಿ ಹೇಗೆ ಪರಿಣಾಮ ಬೀರುತ್ತದೆ?


ಹೌದ್ ಸರ್, ನೀವು ಸರಿಯಾಗಿ ಹೇಳಿದಿರಿನಮ್ಮ ಸಸ್ಯ, ಮೀನು, ಮಾವಿನಹಣ್ಣಿನ ಮರಗಳು ಮತ್ತು ತೋಟಗಳು ಪರಮಾಣು ಶಕ್ತಿ ಸ್ಥಾವರದಲ್ಲಿ ಎಷ್ಟು ಸುರಕ್ಷಿತವಾಗಿವೆ ಎಂದು ಬಹಳ ಚೆನ್ನಾಗಿ ಅರಿತುಕೊಂಡೆವು. ವಾಸ್ತವದಲ್ಲಿ ಯಾವುದೇ ಪುಶ್ಪರಿಣಾಮವಿಲ್ಲ.
ಎಲ್ಲರೂ ಸುತ್ತಲೂ ಅಡ್ಡಾಡತೊಡಗಿದರು ಹಣ್ಣು ತಿಂದ ನಂತರ ಮತ್ತು ಸ್ವಲ್ಪ ವಿರಾಮದ ನಂತರ, ಅವರು ಮತ್ತೆ ಹಿಂದಿರುಗಿ ಬಂದು ದೋಣಿಗಳಲ್ಲಿ ಕುಳಿತರು.
ಶೇಖರ್. ಇಂದು ಬಹಳ ಸ್ಮರಣೀಯ ಪ್ರವಾಸ ದಿನ. ನಾವಿದನ್ನು ಮರೆಯುವುದಿಲ್ಲ.
ಈಗ, ನಾನು ನಿಮ್ಮನ್ನು ಹತ್ತಿರದ ಹಳ್ಳಿ ಮತ್ತು ಕಾಲೋನಿಗೆ ಕರೆದುಕೊಂಡು ಹೋಗುತ್ತೇನೆ.
(ದೋಣಿ ತೀರಕ್ಕೆ ಬಂದಿತು. ಎಲ್ಲರೂ ಕಾಲೋನಿಯ ಕಡೆ ನಡೆಯಲಾರಂಭಿಸಿದರೆ. ಮಾರ್ಗದಲ್ಲಿ ಒಬ್ಬ ವೃದ್ಧರು ತನ್ನ ಮೊಮ್ಮಗನನ್ನು ಭುಜದ ಮೇಲೆ ಹೊತ್ತು ನಡೆಯುತ್ತಿದ್ದರು.).
ಶೇಖರ್. ಇಂದು ಬಹಳ ಸ್ಮರಣೀಯ ಪ್ರವಾಸ ದಿನ. ನಾವಿದನ್ನು ಮರೆಯುವುದಿಲ್ಲ.
ಹಲೋ ಸರ್, ಸುಮ್ಮನೆ ತಿರುಗಾಡಲು. ನೀವು ಹೇಗಿದ್ದೀರಿ? ಇಷ್ಟೊಂದು ಜನ? ಎಲ್ಲಿ ಹೋಗುತ್ತಿದ್ದೀರಿ?


ವಿಶೇಷವೇನೂ ಇಲ್ಲಇವರೆಲ್ಲಾ ಜಗದೀಶ್‌ಪುರ ಹಳ್ಳಿಯಿಂದ ಬಂದಿರುವ ಸ್ನೇಹಿತರು.. ನಾನು ಇವರನ್ನು ಕಾಲೋನಿ ಮತ್ತು ನಮ್ಮ ಹಳ್ಳಿಗೆ ಕರೆದುಕೊಂಡು ಹೋಗುತ್ತಿದ್ದೇನೆ. ರಾಜು ಅವರೆ, ಇವರು ಸಿನ್ಹಾ ಸಾಹೇಬರು ಈತ 40 ವರ್ಷಗಳವರೆಗೆ ಪರಮಾಣು ಸ್ಥಾವರದಲ್ಲಿ ಉದ್ಯೋಗಿಯಾಗಿದ್ದರು. .ನಿವೃತ್ತಿಯ ನಂತರ, ಆತ ಇಲ್ಲೇ ನೆಲೆಸಲು ನಿರ್ಧರಿಸಿದ್ದಾರೆ. ಇವರಿಗೆ ಒಬ್ಬ ಮಗ ಮತ್ತು ಮಗಳು ಹಾಗೂ ಮೊಮ್ಮಗನಿದ್ದಾರೆ. ಈತನ ಮಗಳು ಹೊರದೇಶದಲ್ಲಿ ಓದುತ್ತಿದ್ದಾಳೆ ಹಾಗೂ ಈತನ ಮಗ ಬಹಳ ಪ್ರತಿಷ್ಠೆಯ ಕಂಪನಿಯಲ್ಲಿ ಅಧಿಕಾರಿಯಾಗಿದ್ದಾನೆ. ಈಗಲೂ ಶ್ರೀ. ಸಿನ್ಹಾ ಎಷ್ಟು ಆರೋಗ್ಯವಾಗಿದ್ದಾರೆಂದು ನೀವು ನೋಡಬಹುದು.
ಹೌದು. ಇವರು ನಿವೃತ್ತಿಯಾಗಿದ್ದಾರೆ ಮತ್ತು ಪರಮಾಣು ಶಕ್ತಿ ಸ್ಥಾವರದಲ್ಲಿ ಕೆಲಸ ಮಾಡಿದ್ದಾರೆ ಎಂದರೆ ಯಾರೂ ನಂಬುವುದಿಲ್ಲ.
(ಶ್ರೀಯುತ ಸಿನ್ಹಾರೊಂದಿಗೆ ಮಾತನಾಡಿದ ನಂತರ, ಎಲ್ಲರೂ ಮುಂದೆ ಚಲಿಸಿದರು, ಮಾರ್ಗದಲ್ಲಿ ಹಳ್ಳಿಯನ್ನು ನೋಡಿದರು ಹಾಗೂ ಅಲ್ಲಿ ಚೆನ್ನಾಗಿ ನಿರ್ವಹಿಸಲ್ಪಟ್ಟ ರಸ್ತೆಗಳು, ಕಾಲುವೆಗಳು, ಶೌಚಾಲಯಗಳು ಮತ್ತು ಇತರ ಸಾರ್ವಜನಿಕ ಸ್ಥಳಗಳನ್ನು ನೋಡಿ ಪ್ರಭಾವಿತರಾದರು.)


ವಾವ್! ರಸ್ತೆಗಳು ಬಹಳ ಸ್ವಚ್ಛವಾಗಿ, ಚೆನ್ನಾಗಿ ನಿರ್ವಹಿಸಲ್ಪಟ್ಟಿವೆ, ಕಾಲುವೆಗಳೂ ಇವೆ!
ಅಲ್ಲಿ ನೋಡಿ, ನೀರಿಗೆ ಅನೇಕ ಸ್ಥಳಗಳಲ್ಲಿ ಹ್ಯಾಂಡ್ ಪಂಪ್‌ಗಳೂ ಇವೆ.
ಈ ಎಲ್ಲಾ ಅಭಿವೃದ್ಧಿಗಳನ್ನೂ ಇಲ್ಲಿಯ ಜನರೇ ಮಾಡಿದ್ದಾರೆಯೇ?
ಹೌದು, ಎಲ್ಲಾ ಅಭಿವೃದ್ಧಿಗಳೂ ಇಲ್ಲಿ ಪರಮಾಣು ಶಕ್ತಿ ಸ್ಥಾವರ ಸ್ಥಾಪನೆಯ ನಂತರ ಸಾಧ್ಯವಾಯಿತು.
ಹೌದು ಅಂಕಲ್, ನಾನು ನಿಮಗೆ ಹೇಳಿರಲಿಲ್ಲವೇ?


அரசு பெண்கள் மேல் நிலைப்பள்ளி
ಅಲ್ಲಿ ಅವರಿಗೆ ಒಂದು ಸರ್ಕಾರಿ ಬಾಲಕರ ಶಾಲೆ ಕಂಡುಬಂದಿತು. ಇಲ್ಲಿ ಅವರು ಪುಸ್ತಕಗಳು, ನೋಟ್ ಪುಸ್ತಕ ಮತ್ತು ಬ್ಯಾಗ್‌ಗಳನ್ನು ಉಚಿತವಾಗಿ ಪಡೆಯುತ್ತಾರೆ.
ವಾವ್! ಈ ಹಳ್ಳಿ ಬಾಲಕಿಯರಿಗಾಗಿಯೇ ಪ್ರತ್ಯೇಕ ಶಾಲೆಯನ್ನು ಹೊಂದಿದೆ. ನಮ್ಮ ಹಳ್ಳಿಯಲ್ಲಿ ಹುಡುಗರಿಗೆ ಪ್ರತ್ಯೇಕ ಶಾಲೆಗಳಿಲ್ಲ. ನೋಡಿ, ಇಲ್ಲಿ ಬಾಲಕಿಯರು ಶಾಲೆಗೆ ಹೋಗುತ್ತಾರೆ!
(ಮುಂದೆ, ಅವರು ಹೊಲಿಗೆ ಕೇಂದ್ರವನ್ನು ನೋಡಿದರು, ಅಲ್ಲಿ ಅನೇಕ ಮಹಿಳೆಯರು ಹೊಲಿಗೆಯನ್ನು ಕಲಿಯುತ್ತಿದ್ದರು)
सिलाई घर
ಓಹ್, ಇದು ಟೈಲರಿಂಗ್ ಶಾಲೆ. ಇವರೆಲ್ಲಾ ಹೊಲಿಗೆ ಯಂತ್ರವನ್ನು ಎಲ್ಲಿಂದ ಪಡೆದರು?
ನಾವು ಅವರು ಸ್ವ-ಉದ್ಯೋಗಿಗಳಾಗಲಿ ಎಂದು ನೀಡಿದ್ದೇವೆ.. ಅವರು ಪರಮಾಣು ಶಕ್ತಿ ಸ್ಥಾವರದಲ್ಲಿ ಬಳಸುವ ಬಟ್ಟೆಗಳನ್ನು ಹೊಲಿಯುತ್ತಾರೆ. ನಾವು ಅವುಗಳನ್ನು ಈ ಹಳ್ಳಿಯವರಿಂದ ಮಾರುಕಟ್ಟೆ ದರದಲ್ಲಿ ಕೊಳ್ಳುತ್ತೇವೆ.
ಓಹ್!...ಇದು ನಿಜವಾಗಿಯೂ ಚೆನ್ನಾಗಿದೆ.


ಮುಂದೆ, ಅವರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜನಸಂದಣಿಯನ್ನು ಕಂಡರು. ಆಕಸ್ಮಿಕವಾಗಿ ಒಬ್ಬ ಮಹಿಳಾ ವೈದ್ಯೆ ಹೊರಬಂದುದನ್ನು ನೋಡಿದರು
HOSPITAL
ಡಾ|| ಸೀಮಾ, ಹೇಗಿದ್ದೀರಿ?
ಹಲೋ ಕುಮಾರ್ ಸಾಹೇಬ್, ನಾನು ಚೆನ್ನಾಗಿದ್ದೇನೆ, ನೀವು ಹೇಳಿ.
ಇಂದು ಇಲ್ಲಿ ಏಕೆ ಇಷ್ಟು ಜನಸಂದಣಿಯಿದೆ? ಯಾವುದಾದರೂ ಶುಭ ಸುದ್ದಿ?
ಹೌದು, ಇಂದು ಪಾಂಡು ಮೀನುಗಾರನ ಪತ್ನಿ ಪುಲ್ವಾ ಅವಳಿ ಮಕ್ಕಳಿಗೆ ಜನ್ಮ ನೀಡಿದಳು. ಎಲ್ಲರೂ ಅವರಿಗೆ ಶುಭ ಕೋರಲು ಬಂದಿದ್ದಾರೆ, ಆದ್ದರಿಂದ ಇಲ್ಲಿ ಜನಸಂದಣಿಯಿದೆ.
ಒಳ್ಳೆಯದು! ನನ್ನ ಶುಭಾಶಯಗಳನ್ನು ತಿಳಿಸಿ.
ಈಗ ನೀವು ನೋಡಿ ವಸಂತ ಆಂಟಿ, ಸವಿತಾ ಆಂಟಿ ತಪ್ಪು ಹೇಳಿದ್ದಾರೆ. ಪರಮಾಣು ಶಕ್ತಿ ಸ್ಥಾವರದ ಸುತ್ತ ಯಾವುದೇ ಪರಿಣಾಮವಾಗುವುದಿಲ್ಲ ಎಂದು ನೀವು ನಿಮ್ಮ ಕಣ್ಣುಗಳಿಂದಲೇ ನೋಡಿದಿರಿ. ಹಾಗಿದ್ದಲ್ಲಿ, ಪುಲ್ವಾ ತಾಯಿಯಾಗಲು ಸಾಧ್ಯವಾಗುತ್ತಿರಲಿಲ್ಲ.
ಬನ್ನಿ, ನಾನು ನಿಮ್ಮನ್ನು ಕಾಲೋನಿಗೆ ಕರೆದುಕೊಂಡು ಹೋಗುತ್ತೇನೆ. ಕಾಲೋನಿಯು ಸ್ವಲ್ಪ ದೂರದಲ್ಲಿದೆ, ನಾವು ಅಲ್ಲಿಗೆ ಬಸ್‌ನಲ್ಲಿ ಹೋಗೋಣ.
ಹೌದು ಶೇಖರ್, ನೀನು ಈ ಬಗ್ಗೆ ಸರಿಯಾಗಿ ಹೇಳಿದೆ. ನಾನು ನಮ್ಮ ಹಳ್ಳಿಗೆ ಮರಳಿದ ನಂತರ ಇದನ್ನು ಅವಳಿಗೆ ಹೇಳುತ್ತೇನೆ.


ಎಲ್ಲರೂ ಅವರ ಸೀಟುಗಳಲ್ಲಿ ಕುಳಿತರು ಹಾಗೂ ಬಸ್ ಕಾಲೋನಿಯನ್ನು ತಲುಪಿತು.. (ಕಾಲೋನಿಯ ನೋಟ) ಮನೆಗಳು, ಸಾರ್ವಜನಿಕ ಸ್ಥಳಗಳು, ಅಂಗಡಿಗಳು, ಟಾರ್ ರಸ್ತೆಗಳು, ದೀಪಗಳು, ಸುತ್ತಲೂ ಮರಗಳು ಹಾಗೂ ಕಾರುಗಳೂ ಇದ್ದವು.
ವಾವ್ ಇದು ಬಹಳ ಸುಂದರವಾದ ಕಾಲೋನಿ. ಇಲ್ಲಿ ಎಲ್ಲವೂ ವ್ಯವಸ್ಥಿತವಾಗಿದೆ ಹಾಗೂ ಸುಂದರವಾಗಿದೆ. ಎಲ್ಲಡೆಯೂ ಸ್ವಚ್ಛವಾಗಿದೆ.
ಈ ಕಾಲೋನಿಯನ್ನು ನೋಡಿ ನನಗೆ ಇಲ್ಲೇ ಇರಲು ಮನಸ್ಸಾಗುತ್ತಿದೆ! (ಎಲ್ಲರೂ ನಕ್ಕರು)
ನೀವು ಈಗ ಹತ್ತಿರದ ಹಳ್ಳಿ ಮತ್ತು ಸುತ್ತಲಿನ ಪರಿಸರ ಪರಮಾಣು ಶಕ್ತಿ ಸ್ಥಾವರದಿಂದ ಹೇಗೆ ಪ್ರಯೋಜನವನ್ನು ಪಡೆದಿದೆ ಎಂದು ನೋಡಿದಿರಿ. ನೀವೆಲ್ಲ ಸಾಕಷ್ಟು ಮಾಹಿತಿಯನ್ನು ಸಂಗ್ರಹಿಸಿದ್ದೀರಿ ಎಂದುಕೊಳ್ಳುತ್ತೇನೆ. ಹಾಗೂ ಈ ಪ್ರವಾಸವು ಪರಮಾಣು ಶಕ್ತಿ ಸ್ಥಾವರದ ಬಗೆಗಿನ ನಿಮ್ಮ ಎಲ್ಲಾ ಅನುಮಾನಗಳನ್ನೂ ನಿವಾರಿಸಿದೆ ಎಂದುಕೊಳ್ಳುತ್ತೇನೆ.
ಹೌದು ಸರ್. ವಾಸ್ತವವಾಗಿ, ನಮಗೆ ಶೇಖರ್ ಮೊದಲು ಹೇಳಿದಾಗ, ನಾವು ಅವನನ್ನು ನಂಬಿದ್ದೆವು. ಆದರೆ ಈಗ ಪರಮಾಣು ಶಕ್ತಿ ಸ್ಥಾವರಕ್ಕೆ ನಾವೇ ಸ್ವತಃ ಭೇಟಿ ನೀಡಿದಾಗ, ನಮಗೆ ಈಗ ಯಾವುದೇ ಸಂಶಯ ಅಥವಾ ತಪ್ಪು ಕಲ್ಪನೆಗಳಿಲ್ಲ.
ಹೌದು, ಎಲ್ಲಾ ಸಂಶಯಗಳು ಮತ್ತು ತಪ್ಪು ಕಲ್ಪನೆಗಳು ಈಗ ಮಾಯವಾಗಿದೆ.
ಈಗ, ನಾವೆಲ್ಲರೂ ಅಭಿವೃದ್ಧಿ ಎಂದರೇನು ಮತ್ತು ಅಭಿವೃದ್ಧಿ ಏಕೆ ಅಗತ್ಯ ಎನ್ನುವುದನ್ನು ತಿಳಿದುಕೊಂಡೆವು.
ಹೌದು, ಈಗಿನಿಂದ, ನಾವೂ ಸಹ ಗುಡಿಸಲಿನಲ್ಲಿ ವಾಸಿಸುವುದಿಲ್ಲ, ನಾವೂ ಸಹ ಆಧುನಿಕ ಮನೆಗಳಲ್ಲಿ ವಾಸಿಸುತ್ತೇವೆ (ಎಲ್ಲರೂ ನಕ್ಕರು)




ರಾಜು ಮತ್ತು ಅವರ ಗ್ರಾಮಸ್ಥರು ಪರಮಾಣು ಶಕ್ತಿ ಸ್ಥಾವರದಿಂದ ಮರಳಿದ ನಂತರ ಮುಂದೆ ಏನಾಯಿತು?

ಪರಮಾಣು ಶಕ್ತಿ ಸ್ಥಾವರದ ಬಗ್ಗೆ ಶೇಖರ್ ಇತರರಿಗೆ ಹೇಳಿದಾಗ ಏನಾಯಿತು?

ಅವರ ಹಳ್ಳಿಯಲ್ಲಿ ಪರಮಾಣು ಸ್ಥಾವರ ಸ್ಥಾಪನೆಯಾಗುತ್ತದೆಯೇ?

" ಪರಮಾಣು ಶಕ್ತಿ, ದೇಶದ ಶಕ್ತಿ
ಸ್ವಚ್ಛ ಶಕ್ತಿ, ಸ್ವಚ್ಛ ಭಾರತ "

# ರಾಜುನ ಜಾಗೃತಿ

ಜಗದೀಶ್‌ಪುರ ಒಂದು ಮಾದರಿ ಗ್ರಾಮವಾಗಿ ಹೇಗೆ ಬದಲಾಯಿತು ಎನ್ನುವ ಕಥೆ



एनपीसीआईएल
NPCIL

ಸಾರ್ವಜನಿಕ ಹಿತದೃಷ್ಟಿಯಿಂದ ನೀಡಲಾಗಿದೆ

ನ್ಯೂಕ್ಲಿಯರ್ ಪವರ್ ಕಾರ್ಪೊರೇಶನ್ ಆಫ್ ಇಂಡಿಯಾ

(ಭಾರತ ಸರ್ಕಾರದ ಒಂದು ಸಂಸ್ಥೆ

ಪ್ರಕಾಶಕರು:
ಡೈರೆಕ್ಟೊರೇಟ್ ಆಫ್ ಕಾರ್ಪೊರೇಟ್ ಪ್ಲಾನಿಂಗ್ ಮತ್ತು ಕಾರ್ಪೊರೇಟ್ ಕಮ್ಯೂನಿಕೇಶನ್ಸ್ (ಸಿಪಿ ಮತ್ತು ಸಿಸಿ)
6-S-14, ವಿಕ್ರಮ್ ಸಾರಾಭಾಯ್ ಭವನ್ ಅಣುಶಕ್ತಿ ನಗರ್, ಮುಂಬೈ - 400094
ಇ–ಮೈಲ್: cpcc@npcil.co.in | ವೆಬ್‌ಸೈಟ್: www.npcil.nic.in